## 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ರವರ ನ್ಯಾಯಾಲಯ, ಕಡೂರು

## ಸಿ.ಸಿ.ನಂ.997/2022

| | | | |
|---|---|---|---|
| ಸಾಕ್ಷಿದಾರರ ಹೆಸರು | ಆಶಾ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ 06.12.2024 | |
| ಗಂಡನ ಹೆಸರು | ಶಂಕರಲಿಂಗೇಗೌಡ | | |
| ವಯಸ್ಸು | 40 ವರ್ಷ | | |
| ವೃತ್ತಿ | ಗೃಹಿಣಿ | ಚಾಸಾ | 2 |
| ವಾಸಸ್ಥಳ | ಬೆಂಗಳೂರು | ಪ್ರಾಸಾ | 2 |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ಅವರಿಂದಃ**

ದಿನಾಂಕ 13.04.2022 ರಂದು ನಾನು, ನನ್ನ ಗಂಡ ಮತ್ತು ಮಗಳು ಬಾಣೂರಿನ ನನ್ನ ತವರು ಮನೆಗೆ ಹೋಗಿ ಊಟ ಮುಗಿಸಿ ವಾಪಸ್ಸು ಸಂಜೆ 6.00 ಗಂಟೆಗೆ ನಮ್ಮ ಬೈಕ್ ನಂಬರು ಕೆಎ-18/ಎಕ್ಸ್-4701 ರ ಬೈಕಿನಲ್ಲಿ ಎಸ್.ಬಿದರೆಗೆ ಬರುತ್ತಿರುವಾಗ ಕೇತುಮಾರನಹಳ್ಳಿಯಿಂದ ಎಡಬದಿಯ ರಸ್ತೆಯಲ್ಲಿ ಬರುತ್ತಿರುವಾಗ ಜೆ.ಸಿ.ಬಿ.ಯೂ ಹೊಲದ ಪೊದೆಯೊಳಗಿನಿಂದ ಬಂದು ನಮ್ಮ ಬೈಕಿಗೆ ಡಿಕ್ಕಿಪಡಿಸಿರುತ್ತದೆ. ಸದರಿ ಜೆ.ಸಿ.ಬಿ.ನಂಬರು ಕೆಎ-13/ಪಿ-7283 ನ ಚಾಲಕ ಯಾವುದೇ ಸೂಚನೆಯನ್ನು ನೀಡದೆ ನಮ್ಮ ಬೈಕಿಗೆ ಡಿಕ್ಕಿಪಡಿಸಿರುತ್ತಾರೆ. ಡಿಕ್ಕಿಪಡಿಸಿದ ನಂತರ ನಾವು ಮೂರು ಜನರು ರಸ್ತೆಯ ಮೇಲೆ ಬಿದ್ದಿರುತ್ತೇವೆ. ನನ್ನ ಗಂಡನಿಗೆ ತಲೆಯ, ಹೊಟ್ಟೆಯ ಮತ್ತು ಎದೆ ಭಾಗಕ್ಕೆ ಪೆಟ್ಟುಬಿದ್ದಿರುತ್ತದೆ. ನನಗೆ ಕುತ್ತಿಗೆ ಭಾಗ ಮತ್ತು ಮೂಗಿಗೆ ಪೆಟ್ಟು ಬಿದ್ದಿರುತ್ತದೆ. ನನ್ನ ಮಗಳಿಗೆ ಯಾವುದೇ ಪೆಟ್ಟು ಆಗಿರುವುದಿಲ್ಲ. ತಕ್ಷಣ ನಾನು ಚಾಸಾ-3 ರವರಿಗೆ ಫೋನ್ ಕರೆ ಮಾಡಿರುತ್ತೇನೆ.

ಚಾಸಾ–3 ರವರು ಬರುವಷ್ಟರಲ್ಲಿ ಸ್ಥಳೀಯರು ಆಂಬುಲೆನ್ಸ್‌ಗೆ ಫೋನ್ ಮಾಡಿರುತ್ತಾರೆ. ನಂತರ ಚಾಸಾ–3 ರವರು ಅಲ್ಲಿಗೆ ಬಂದು ಅಪಘಾತದ ಬಗ್ಗೆ ತಿಳಿದುಕೊಂಡು ನಂತರ ಆಂಬುಲೆನ್ಸ್ ಕಡೂರಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ನಮ್ಮನ್ನು ಕಳುಹಿಸಿರುತ್ತಾರೆ. ಕಡೂರಿನ ಸರ್ಕಾರಿ ಆಸ್ಪತ್ರೆಯವರು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ನಾರಾಯಣ ಹೃದಯಾಲಯಕ್ಕೆ ಕಳುಹಿಸಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ನಾನು ಮತ್ತು ನನ್ನ ಗಂಡ ಚಿಕಿತ್ಸೆಯನ್ನು ಪಡೆದಿರುತ್ತೇವೆ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಆರ್ ವಕೀಲರಿಂದಃ</u>**

ಬಾಣೂರಿನಿಂದ ಎಸ್.ಬಿದರೆ ಗ್ರಾಮಕ್ಕೆ ಸುಮಾರು 20 ಕಿ.ಮೀ. ಅಂತರವಿರುತ್ತದೆ. ಪೊಲೀಸರು ನನ್ನ ಹೇಳಿಕೆಯನ್ನು ದಿನಾಂಕ 20.04.2022 ರಂದು ಪೊಲೀಸ್ ಠಾಣೆಯಲ್ಲಿ ಪಡೆದುಕೊಂಡಿರುತ್ತಾರೆ. ಮಧ್ಯಾಹ್ನ 1.00 ಗಂಟೆಯಿಂದ 2.00 ಗಂಟೆಯವರೆಗು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಾನು ಹೇಳಿಕೆ ಕೊಡುವಾಗ ನಾನು ಮತ್ತು ಚಾಸಾ–3 ರವರು ಜೊತೆಯಲ್ಲಿ ಇದ್ದೆವು. ನಾನು ಪೊಲೀಸರಾದ ವಿದ್ಯಾಶಂಕರ ನಾಯ್ಕರವರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನನ್ನ ಹೇಳಿಕೆಗೆ ನಾನು ಸಹಿಯನ್ನು ಮಾಡಿರುವುದಿಲ್ಲ.

ಬಾಣೂರಿನಿಂದ ಕೇತುಮಾರನಹಳ್ಳಿಗೆ ಸುಮಾರು 05 ಕಿ.ಮೀ. ದೂರ ಕ್ರಮಿಸಿರುತ್ತೇವೆ. ಬಾಣೂರಿನಿಂದ ಸಂಜೆ 6.00 ಗಂಟೆಗೆ ಹೊರಟಿರುತ್ತೇವೆ. ನಾವು ಹೋಗುತ್ತಿದ್ದ ರಸ್ತೆ ಸಿಂಗಲ್ ರಸ್ತೆಯಾಗಿರುತ್ತದೆ. ಕೇತುಮಾರನಹಳ್ಳಿಯಿಂದ ಪೂರ್ವ ದಿಕ್ಕಿಗೆ ಅಪಘಾತವಾಗಿರುತ್ತದೆ. ಕೇತುಮಾರನಹಳ್ಳಿಯಿಂದ ಪೂರ್ವಕ್ಕೆ ಎಸ್.ಬಿದರೆಗೆ ಹೋಗುವ ರಸ್ತೆ ಇರುತ್ತದೆ. ಕೇತುಮಾರನಹಳ್ಳಿಯಿಂದ ಸುಮಾರು ಒಂದುವರೆ ಕಿ.ಮೀ. ಅಂತರದಲ್ಲಿ ಅಪಘಾತವಾಗಿರುತ್ತದೆ.

ಕೇತುಮಾರನಹಳ್ಳಿಯಿಂದ ಪಶ್ಚಿಮ ದಿಕ್ಕಿಗೆ ಎಸ್.ಬಿದರೆ ಗ್ರಾಮವಿರುತ್ತದೆ ಎಂದರೆ ಸರಿಯಲ್ಲ.

ಕೇತುಮಾರನಹಳ್ಳಿಯಿಂದ ಎಸ್.ಬಿದರೆ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಎಷ್ಟು ಜಮೀನು ಬರುತ್ತವೆ ಎಂದು ನನಗೆ ಗೊತ್ತಿಲ್ಲ. ವಿನಯ್ ಎಂಬುವವರ ಜಮೀನಿನ ಬಳಿ ಅಪಘಾತವಾಗಿರುತ್ತದೆ. ಅಪಘಾತವಾದ ಸ್ಥಳದ ಜಮೀನು ಕೇತುಮಾರನಹಳ್ಳಿಗೆ ಸೇರಿರುತ್ತದೆ. ಅಪಘಾತವು ಕೇತುಮಾರನಹಳ್ಳಿಯ ವಿನಯ್ ಎಂಬುವವರ ಜಮೀನಿನ ಬಳಿ ಆಗಿರುತ್ತದೆ ಎಂದು ನನ್ನ ಹೇಳಿಕೆಯಲ್ಲಿ ನಾನೇನು ತಿಳಿಸಿರುವುದಿಲ್ಲ. ಸದರಿ ವಿಷಯವನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ.

ಮೋಟಾರು ಬೈಕಿನಲ್ಲಿ ನಾನು, ನನ್ನ ಮತ್ತು ಹಿಂದೆ ಕುಳಿತ್ತಿದ್ದೆವು. ನಾನು ನನ್ನ ಮಗಳನ್ನು ಕೈಯಲ್ಲಿ ಹಿಡಿದುಕೊಂಡು ಕುಳಿತ್ತಿದ್ದೆ. ನನ್ನ ಗಂಡ ಸದರಿ ದಿನದಂದು ಎಷ್ಟು ಸ್ಪೀಡಿನಲ್ಲಿ ಬೈಕ್ ಚಾಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಜೆ.ಸಿ.ಬಿ. ಯಾವ ಭಾಗದ ಕಡೆಯಿಂದ ಬಂದು ಡಿಕ್ಕಿಪಡಿಸಿರುತ್ತದೆ ಎಂದು ನನಗೆ ಗೊತ್ತಿಲ್ಲ. ಜೆ.ಸಿ.ಬಿ.ಯು ಮೊದಲಿಗೆ ಬೈಕಿಗೆ ಡಿಕ್ಕಿಪಡಿಸಿ ನಂತರ ನನ್ನ ಗಂಡನಿಗೆ ಡಿಕ್ಕಿಪಡಿಸಿರುತ್ತದೆ. ಜೆ.ಸಿ.ಬಿ.ಯು ಬೈಕಿನ ಮುಂದಿನ ಎಡಭಾಗದ ಹ್ಯಾಂಡೆಲ್ ಭಾಗಕ್ಕೆ ಡಿಕ್ಕಿಪಡಿಸಿರುತ್ತದೆ.

ನಾವು ಹೋಗುತ್ತಿದ್ದ ಟಾರು ರಸ್ತೆಯಾಗಿದ್ದು, ರಸ್ತೆಯ ಎರಡು ಬದಿಯ ಜಮೀನುಗಳು ನಮಗೆ ಕಾಣಿಸುತ್ತಿದ್ದವು. ಜೆ.ಸಿ.ಬಿ.ಯು ಬಂದ ಜಾಗದಲ್ಲಿ ರಸ್ತೆ ಇತ್ತು ಎಂದರೆ ಸರಿ. ಬೈಕು ಅಪಘಾತವಾಗಿ ಎಡಭಾಗದ ಮಣ್ಣಿನ ರಸ್ತೆಯ ಮೇಲೆ ಬಿದ್ದಿರುತ್ತದೆ. ನನ್ನ ಗಂಡ ಬಲಭಾಗದ ಟಾರು ರಸ್ತೆಯ ಮೇಲೆ ಮಧ್ಯದಲ್ಲಿ ಬಿದ್ದಿದರು. ನಾನು ನನ್ನ ಗಂಡ ಟಾರು ರಸ್ತೆಯ ಮಧ್ಯ ಭಾಗದಲ್ಲಿಯೇ ಬಿದ್ದಿದ್ದೆವು. ನನಗೆ ಕುತ್ತಿಗೆಗೆ ಮತ್ತು ಮೂಗಿಗೆ ಪೆಟ್ಟಾಗಿತ್ತು. ನಾನು ಸದರಿ ಗಾಯಗಳಿಗೆ ಸಂಬಂಧಿಸಿದಂತೆ ಕಡೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಪಡೆದಿರುತ್ತೇನೆ. ಈ ಬಗ್ಗೆ ನಾನು ಗಾಯದ ಪ್ರಮಾಣಪತ್ರವನ್ನು ಪೊಲೀಸರಿಗೆ ನೀಡಿರುತ್ತೇನೆ.

ನನ್ನ ಮಗಳು ಅಪಘಾತವಾದಾಗ ಮೂರು ವರ್ಷದ ಮಗಳಾಗಿದ್ದಳು. ಮಗುವಿಗೆ ಯಾವುದೇ ಪೆಟ್ಟಾಗಿರುವುದಿಲ್ಲ. ನನಗೆ ಮೂಗಿಗೆ ಮತ್ತು ಕುತ್ತಿಗೆಗೆ ಮಾತ್ರ ಪೆಟ್ಟಾಗಿತ್ತು. ಸಾಮಾನ್ಯವಾಗಿ ಮಗುವನ್ನು ಎತ್ತಿಕೊಂಡು ಬೈಕಿನಿಂದ ಬಿದ್ದಾಗ ಮೊದಲು ಕೈಯನ್ನು ಊರುತ್ತೇವೆ ಎಂದರೆ ಸರಿ. ನಾನು ಸದರಿ ದಿನದಂದು ಬೈಕಿನಲ್ಲಿ ಮಗುವನ್ನು ಎತ್ತಿಕೊಂಡು ಹೋಗೇ ಇರಲಿಲ್ಲ, ಎಲ್ಲವೂ ಕಟ್ಟುಕತೆಯಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

ಟಾರು ರಸ್ತೆ 12 ರಿಂದ 15 ಅಡಿ ರಸ್ತೆಯಾಗಿತ್ತು. ಮಣ್ಣಿನ ರಸ್ತೆಯ ಬಗ್ಗೆ ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಟಾರು ರಸ್ತೆ, ಮಣ್ಣು ರಸ್ತೆ ಎರಡು ಸಮನಾಗಿತ್ತು ಎಂದರೆ ಸರಿ. ನಾವು ಹೋಗುತ್ತಿದ್ದ ರಸ್ತೆಯು ಸಮದ್ದಾಟ್ಟಾದ ರಸ್ತೆಯಾಗಿರುತ್ತದೆ ಎಂದರೆ ಸರಿ. ಸಮದ್ದಾಟ್ಟಾದ ಪ್ರದೇಶವಾಗಿದ್ದರಿಂದ ಬಯಲು ಪ್ರದೇಶದ ಚೆನ್ನಾಗಿ ಕಾಣಿಸುತ್ತಿತ್ತು ಎಂದರೆ ಸರಿ.

ನನ್ನ ಗಂಡನಿಗೆ ಎದೆಗೆ, ತಲೆಗೆ, ಹೊಟ್ಟೆ ಭಾಗಕ್ಕೆ ಪೆಟ್ಟು ಬಿದ್ದಿತ್ತು. ಬೈಕು ರಸ್ತೆಯಲ್ಲಿ ಬಿದ್ದಾಗ ಅದರ ಬಿಡಿ ಭಾಗಗಳು, ಗ್ಲಾಸ್ ಪೀಸ್ ಗಳು ಎಲ್ಲಾ ಚೆಲ್ಲಾ-ಪಿಲ್ಲಿಯಾಗಿ ಬಿದ್ದಿದ್ದವು. ಬೈಕಿನ ಇಂಡಿಕೇಟರ್, ಡೂಮ್, ಗ್ಲಾಸ್ ಪೀಸಸ್ ಎಲ್ಲವು ಟಾರು ರಸ್ತೆಯಲ್ಲಿ ಚೆಲ್ಲಾ-ಪಿಲ್ಲಿಯಾಗಿ ಬಿದ್ದಿದ್ದವು. ಅಪಘಾತವಾದ ಸ್ಥಳದಲ್ಲಿ ಸುಮಾರು ನಾವು 15 ನಿಮಿಷಗಳ ಸ್ಥಳದಲ್ಲಿ ಇದ್ದೆವು. ಅಪಘಾತವಾದಾಗ ಕೇಸುಮಾರನಹಳ್ಳಿಯ ಸ್ಥಳೀಯರು ಬಂದಿದ್ದರು, ಅವರ ಹೆಸರುಗಳು ನನಗೆ ಗೊತ್ತಿಲ್ಲ. ಅಪಘಾತವಾದ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಅಪಘಾತವಾಯಿತು ಎಂದು ನಾನು ಹೇಳುವ ಸ್ಥಳದಿಂದ ಕೇತುಮಾರನಹಳ್ಳಿ ಸುಮಾರು ಒಂದುವರೆ ಕಿ.ಮೀ. ಅಂತವಿರುತ್ತದೆ.

ಘಟನಾ ಸ್ಥಳದಿಂದ ಕಡೂರಿಗೆ ಆಂಬುಲೆನ್ಸ್ ನಲ್ಲಿ ಬಂದಿರುತ್ತೇವೆ. ಆಂಬುಲೆನ್ಸ್ ಎಲ್ಲಿಂದ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾವು ಯಾವುದೇ ಆಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-3 ರವರು ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ.

ಆಸ್ಪತ್ರೆಗೆ ಕರೆದುಕೊಂಡು ಬಂದವರ ಹೆಸರಿನಲ್ಲಿ ನನ್ನ ಹೆಸರನ್ನು ನಮೂದಿಸಿರುತ್ತೇನೆ. ಆಸ್ಪತ್ರೆಗೆ ಬಂದಾಗ ಎಷ್ಟು ಸಮಯವಾಗಿತ್ತು ಎಂದು ನನಗೆ ಗೊತ್ತಿಲ್ಲ.

ನಾನು ಸ್ಥಳದಲ್ಲಿ ಇಲ್ಲದೆ ಇದ್ದುದ್ದರಿಂದ ನನಗೆ ಯಾವುದೇ ವಿಚಾರಗಳು ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಡೂರಿನ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುವುದು ಸಹ ಸುಳ್ಳು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಎದೆ ಭಾಗ, ತೊಡೆ ಭಾಗ, ತಲೆ ಭಾಗ ಮತ್ತು ಹೊಟ್ಟೆ ಭಾಗಕ್ಕೆ ಪೆಟ್ಟಾಗಿತ್ತು ಎಂದು ನಾನು ವೈದ್ಯರಿಗೆ ತಿಳಿಸಿರುತ್ತೇನೆ. ನಾನು ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದಿರುವುದಿಲ್ಲ. ಕಡೂರಿನಲ್ಲಿ ನನ್ನ ಗಂಡ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದಿರುವುದಿಲ್ಲ.

ಚಾಸಾ–3 ರವರು ಅಪಘಾತವಾದ ಸ್ಥಳಕ್ಕೆ ಸಂಜೆ 7.00 ಗಂಟೆ ಅಷ್ಟರಲ್ಲಿ ಬಂದಿರುತ್ತಾರೆ. ಕುನ್ನಾಳು ಗ್ರಾಮದಿಂದ ಘಟನಾ ಸ್ಥಳಕ್ಕೆ ಸುಮಾರು 07 ಕಿ.ಮೀ ಅಂತರವಿರುತ್ತದೆ. ಕುನ್ನಾಳು ಗ್ರಾಮ ಕೇತುಮಾರನಹಳ್ಳಿಯಿಂದ ಸುಮಾರು 08 ಕಿ.ಮೀ. ಅಂತರವಿರುತ್ತದ ಎಂದರೆ ಸರಿಯಲ್ಲ. ಚಾಸಾ–3 ರವರು ನನ್ನ ಸಂಬಂಧಿಯಾಗಬೇಕು. ಚಾಸಾ–3 ರವರು ನಮ್ಮೊಂದಿಗೆ ಶಿವಮೊಗ್ಗಕ್ಕೆ ಬಂದಿರಲಿಲ್ಲ. ನಾನು ಅಪಘಾತವಾದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿಸಿರುತ್ತೇನೆ. ಚಾಸಾ–3 ರವರಿಗೆ ಸಂಪೂರ್ಣ ಮಾಹಿತಿ ತಿಳಿಸಿದ್ದರಿಂದ ಅವರಿಗೆ ದೂರು ಕೊಡಲು ಯಾವುದೇ ತೊಂದರೆ ಇರಲಿಲ್ಲ. ಅಪಘಾತವಾಗಿಲ್ಲದೆ ಇರುವುದರಿಂದ ನಾನಾಗಲಿ, ಚಾಸಾ–3 ರವರಾಗಲಿ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಎಂ.ಎಲ್.ಸಿ. ಯಲ್ಲಿ ನಾವು ಆಸ್ಪತ್ರೆಗೆ ಎಷ್ಟು ಗಂಟೆಗೆ ಹೋಗಿರುತ್ತೇವೆ ಮತ್ತು ಯಾವುದರಲ್ಲಿ ಹೋಗಿರುತ್ತೇವೆ ಎಂದು ನಮೂದಿರುತ್ತದೆ ಎಂದರೆ ಸರಿ. ಎಂ.ಎಲ್.ಸಿ. ಕಾಪಿಯನ್ನು ನಾವು ಪೊಲೀಸರಿಗೆ ನೀಡಿರುತ್ತೇನೆ. ಅದರಲ್ಲಿ ಏನು

ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡನಿಗೆ ವಾಹನ ಚಾಲನಾ ಪರವಾನಿಗೆ ಸದರಿ ಸಂದರ್ಭದಲ್ಲಿ ಇತ್ತು.

ಜೆ.ಸಿ.ಬಿ.ಯು ಕೆಲಸ ಮುಗಿಸಿಕೊಂಡು ಬರುತ್ತಿತ್ತು. ಜೆ.ಸಿ.ಬಿ.ಯು ಚಲಿಸುವಾಗ ನೆಲದಿಂದ ನಾಲ್ಕು ಅಡಿ ಎತ್ತರದಲ್ಲಿ ಡೋಸರ್ ಇರುತ್ತದೆ ಎಂದರೆ ಸರಿ. ನಾಲ್ಕು ಅಡಿ ಎತ್ತರದಲ್ಲಿ ಜೆ.ಸಿ.ಬಿ.ಯ ಡೋಸರ್ ಇರುವುದರಿಂದ ಅದು ನನ್ನ ಗಂಡ ಚಲಾಯಿಸುತ್ತಿದ್ದ ಬೈಕಿನ ಹ್ಯಾಂಡಲಿಗೆ ತಗುಲಿಸುವ ಪ್ರಮಯವೇ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರದ ಕೇಸನ್ನು ಹಾಕಿರುತ್ತೇನೆ. ಪರಿಹಾರ ಪಡೆಯುವ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಅಪಘಾತದಲ್ಲಿ ಪೆಟ್ಟಾಗಿತ್ತು, ಅದಕ್ಕೆ ಚಿಕಿತ್ಸೆಯನ್ನು ಸಹ ಪಡೆದಿರುತ್ತೇವೆ ಎಂಬುದು ಸಹ ಸುಳ್ಳು ಎಂದರೆ ಸರಿಯಲ್ಲ. 1 ನೇ ಆರೋಪಿಯು ಸದರಿ ದಿನದಂದು ಜೆ.ಸಿ.ಬಿ.ಯನ್ನು ಚಲಾಯಿಸುತ್ತಿದ್ದ ಎಂಬುದು ಸಹ ಸುಳ್ಳು ಎಂದರೆ ಸರಿಯಲ್ಲ. ನಾನು 1 ನೇ ಆರೋಪಿಯನ್ನು ಇದೇ ಮೊದಲು ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ.ಹೆ.ಪ್ರ:ದಃನ್ಯಾ:ದಂ.,ರವರು, ಕಡೂರು.